

(6ನೇ ಪುಟದಿಂದ)

ಚೆಲುವು ಕಣ್ಣಿಗೆ ರಾಚುತ್ತದೆ. ಬರದ ನಾಡಿನಿಂದ ಬಂದವರಿಗೆ ಹಬ್ಬ. ಬಸ್ಸು, ವಾಹನಗಳಲ್ಲಿ ಸಾಗುತ್ತಿದ್ದರೆ ನಿಂತು ನೋಡುವ ತವಕ. ಒಂದು ರೀತಿ 'ಬಡವರ ಊಟಿ' ಎಂದರೂ ತಪ್ಪಾಗದು.

ಕಡು ಬೇಸಗೆಯಲ್ಲೂ ಒತ್ತದ ಹಸಿರು ಇಲ್ಲಿನದು. ಮಳೆಗಾಲದಲ್ಲಿ ಸದಾ ಮಂಜಿನ ಯಾತ್ರೆ. ಕ್ಷಣ ಕ್ಷಣವೂ ರೋಮಾಂಚನ. ನೋಡ ನೋಡುತ್ತಿದ್ದಂತೆ ಎಲ್ಲಿ ನೋಡಿದರಲ್ಲಿ ಶ್ವೇತ ವರ್ಣ. ದಾರಿ ಕಾಣದಷ್ಟು ಮಂಜಿನ ಸಿಂಚನ. ಸ್ವಲ್ಪ ಹೊತ್ತಿನಲ್ಲಿ ಮಂಜು ಸರಿದು ಹಸಿರ ಹೊನ್ನ ದರ್ಶನ. ಕೂಲ್–ಕೂಲ್ ವಾತಾವರಣ. ಮೈ ನಡುಗಿಸುವ ಚಳಿ. ಇನ್ನೊಂದೆಡೆ ಹೆಜ್ಜೆ ಹೆಜ್ಜೆಗೂ ಎದುರಾಗುವ ಜಲರಾಶಿ. ಬೇಸಗೆಯಲ್ಲಿ ಕಣ್ಮರೆಯಾಗಿ ಮುಂಗಾರು ಅಬ್ಬರಿಸುತ್ತಿದ್ದಂತೆಯೇ ಪುಟ್ಟ ಜಲಕನ್ಯೆಯರ ನರ್ತನ. ಒಂದೆರಡಲ್ಲ, ಹತ್ತಾರು. ಒಂದಕ್ಕಿಂತ ಒಂದು ಮೇಲು. ಅವರ್ಣನೀಯ ಚೆಲುವು ಹೊತ್ತ ಬಿನ್ನಾಣಗಿತ್ತಿಯರು. ಉಕ್ಕುವ ಹಾಲ್ನೊರೆ, ಮುತ್ತಿನ ಮಳೆ!



ದಾರಿ ಕಾಣದಷ್ಟು ಮಂಜಿನ ಮಳೆ

ಹಸಿರ ಲಾಸ್ಯ



ಚಳಿಗಾಲದಲ್ಲಿ ಆಹಾ.. ಅನುಭವಿಸಿಯೇ ತೀರಬೇಕು. ಘಾಟಿ ಆರಂಭಕ್ಕೆ ಮುನ್ನ ಒಂದು ಅನುಭವವಾದರೆ, ಇಳಿಯುತ್ತಿದ್ದಂತೆಯೇ ಮತ್ತೊಂದು. ಎತ್ತರೆತ್ತರದ ಮರಗಳು. ಕಾಡು ಕುಸುಮಗಳು, ಹುಲ್ಲಿನ ಸಾಲು. ಬೆತ್ತದ ಸಸಿಗಳು. ಝರಿಗಳು, ಪಕ್ಷಿಗಳ ಕಲರವ– ನಿಜಕ್ಕೂ ಇದು ಮನಸ್ಸನ್ನು ಹಗುರಗೊಳಿಸುವ ಪರಿಸರ.

ಮಾರ್ಗಮಧ್ಯದಲ್ಲಿ ಅಣ್ಣಪ್ಪ ಸ್ವಾಮಿಯ ಚಿಕ್ಕದೊಂದು ದೇಗುಲವಿದೆ. ಜನರ ನಂಬಿಕೆ ಅಪಾರ. ಮುಂದಿನ ಹಾದಿ ಸುಗಮವಾಗಿರಲಿ ಎನ್ನುವ ಆಶಯ. ಬಹುತೇಕ ವಾಹನಗಳಿಗೆ ಇಲ್ಲಿ ನಿಲುಗಡೆ. ಕಡಿದಾದ ರಸ್ತೆ. ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ತಪ್ಪಿದ್ದಲ್ಲ. ಚಾಲಕರಿಗೆ ಸವಾಲು. ಮಳೆಗಾಲದಲ್ಲಿ ಗುಡ್ಡ ಜರಿಯುವುದು, ಕಲ್ಲುಬಂಡೆ ಕುಸಿತ ಸಾಮಾನ್ಯ. ಹೀಗಾದಾಗ ಸಂಚಾರಕ್ಕೆ ಸಂಚಕಾರ. ಆಗ ಧರ್ಮಸ್ಥಳ, ಮಂಗಳೂರು ಕಡೆಗೆ ತೆರಳುವ ವಾಹನಗಳೆಲ್ಲ ಶಿರಾಡಿ ಘಾಟಿಯನ್ನು ಆಶ್ರಯಿಸುತ್ತವೆ. ಸುತ್ತು ಬಳಸಿ ಪಯಣಿಸುತ್ತವೆ.

ಚಾರ್ಮಾಡಿ ಘಾಟಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸುವ ಅಧಿಕಾರಸ್ಥರ ಭರವಸೆಗೂ ಬಹಳ ವಯಸ್ಸಾಯಿತು! ಇನ್ನೊಂದೆಡೆ ಭೈರಾಪುರ–ಶಿಶಿಲ ಪರ್ಯಾಯ ಮಾರ್ಗವೂ ನೆನೆಗುದಿಗೆ ಬಿದ್ದಿದೆ!